ಅ) ಮತ್ತು ಇ) ಕೈಗೊಂಡ ಕಾರ್ಯಕ್ರಮಗಳು, ಮಂಜೂರಾದ ಹಾಗೂ ಬಿಡುಗಡೆ ಮಾಡಿದ ಹಣದ ವಿವರ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಸ್ವಾವಲಂಬಿನ	2002-03	2003-04	2004-05
ಮಾರ್ಜಿನ ಹಣ ಸಾಲದ ಯೋಜನೆ	19.25	14.61	16.69
ಸಹಾಯಧನ ಯೋಜನೆ	9.25	6.30	5.85
ನೇರ ಸಾಲದ ಯೋಜನೆ	28.79	49.24	30.60
ತರಬೇತಿ ಕಾರ್ಯಕ್ರಮಗಳು	1.05	–	–
ಗಂಗಾ ಕಲ್ಯಾಣ ಯೋಜನೆ	30.50	80.60	35.65

5234(5800) ಶ್ರೀ ಅಪ್ಪಾಸಾಹೇಬ್ (ಅಪ್ಪು)ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಯಾವ ಯಾವ ಪ್ರವಾಸಿ ಸ್ಥಳಗಳನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲಾಗಿದೆ;

ಆ) ವಿಶ್ವ ವಿಖ್ಯಾತ ಗೋಗುಮ್ಮಟವನ್ನು ಹೊಂದಿರುವ ವಿಜಾಪುರವನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಾದರೆ ಸರ್ಕಾರವು ಯಾವ ಯಾವ ಪ್ರವಾಸಿ ಸ್ಥಳಗಳನ್ನು ವಿಶ್ವಪರಂಪರೆಯ ಪಟ್ಟಿಗೆ (ಯುನೆಸ್ಕೋ) ಸೇರಿಸಲು ಸಿದ್ದತೆ ನಡೆಸಿದೆ; ಅವು ಯಾವುವು;

ಈ) ಗೋಲಾಗುಮ್ಮಟವನ್ನು ವಿಶ್ವ ಪರಂಪರೆಯ ಪಟಿಗೆ ಯಾವಾಗ ಸೇರಿಸಲಾಗುವುದು;

ಉ) ಗೋಳಗುಮ್ಮಟವನ್ನು ವೀಕ್ಷಿಸಲು ಬರುವ ದೇಶೀಯ ಹಾಗೂ ವಿದೇಶಿ ಪ್ರವಾಸಿಗರಿಗಾಗಿ ಸರ್ಕಾರವು ಯಾವ ಪ್ರವಾಸಿಗರಿಗಾಗಿ ಸರ್ಕಾರವು ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಒದಗಿಸಿದೆ? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) 1. ಪಟ್ಟದಕಲ್ಲಿನಲ್ಲಿರುವ ಸ್ಮಾರಕಗಳ ಸಮೂಹ ಬಾಗಲಕೋಟೆ ಜಿಲ್ಲೆ

2. ಹಂಪಿಯಲ್ಲಿ ಸ್ಮಾರಕಗಳ ಸಮೂಹ, ಬಳ್ಳಾರಿ ಜಿಲ್ಲೆ

ಆ) ಹೌದು. ಭಾರತೀಯ ಪುರಾತತ್ವ ಸರ್ವೇಕ್ಷಣೆ, ಧಾರವಾಡ ವಲಯವು ಇತ್ತೀಚೆಗೆ ಬಿಜಾಪುರ ನಗರದಲ್ಲಿರುವ ವಿಶ್ವವಿಖ್ಯಾತ ಗೋಳ-ಗುಂಬಜನ್ನು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಪ್ರಸ್ತಾಪಿಸಿರುತ್ತಾರೆ.

ಇ) ಪಟ್ಟದ ಕಲ್ಲಿನಲ್ಲಿರುವ ಸ್ಮಾರಕಗಳ ಸಮೂಹಕ್ಕೆ ನೀಡಿರುವ ವಿಶ್ವ ಪರಂಪರೆ ಸ್ಥಾನಮಾನವನ್ನು ಐಹೊಳೆ, ಬಾದಾಮಿ ಮತ್ತು ಮಹಾಕೂಟದಲ್ಲಿರುವ ಸ್ಮಾರಕಗಳ ಸಮೂಹಕ್ಕೂ ವಿಸ್ತರಿಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣೆ, ಧಾರವಾಡ ವಲಯವು ಪ್ರಸ್ತಾಪಿಸರುತ್ತದೆ. ಹಾಗೆಯೇ ಬಿಜಾಪುರ ನಗರದಲ್ಲಿರುವ ವಿಶ್ವವಿಖ್ಯಾತ ಗೋಳಗುಂಬಜ್ ಹಾಗೂ ಇಬ್ರಾಹಿಂ–ರೋಜಾ ಸ್ಮಾರಕಗಳನ್ನು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ಪ್ರಸ್ತಾಪಿಸಿರುತ್ತದೆ.

ಈ) ಇದು ಕೇಂದ್ರ ಸರ್ಕಾರದ ಮತ್ತು ಅಂತರಾಷ್ಟ್ರೀಯ ಸಂಸ್ಥೆಯ ಕಾರ್ಯನೀತಿಗೆ ಸಂಬಂಧಪಟ್ಟಿರುವುದರಿಂದ ಕೇಂದ್ರ ಸರ್ಕಾರದ ಸಂಸ್ಕೃತಿ ಮಂತ್ರಾಲಯವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಉ) ಭಾರತೀಯ ಪುರಾತತ್ವ ಸರ್ವೇಕ್ಷಣೆ, ಧಾರವಾಡ ವಲಯವು ಬಿಜಾಪುರ ನಗರದಲ್ಲಿರುವ ಗೋಳಗುಂಬಜನ್ನು ನೋಡಲು ಬರುವ ಸಂದರ್ಶಕರಿಗಾಗಿ ಕೆಲವು ಸಾರ್ವಜನಿಕ ಸೌಕರ್ಯಗಳನ್ನು ಒದಗಿಸಿದೆ. ಉದಾಹರಣೆಗೆ ಕುಡಿಯುವ ನೀರು, ಶೌಚಾಲಯ ವಿಭಾಗ, ಕ್ಯಾಂಟೀನ್, ವಾಹನಗಳ ಪಾರ್ಕಿಂಗ್, ಸ್ಮಾರಕಕ್ಕೆ ಸೇರಿದ ಸೌಂದರ್ಯಯುತವಾದ ಉದ್ಯಾನವನದಲ್ಲಿ ಸಂದರ್ಶಕರಿಗಾಗಿ ಬೆಂಚುಗಳು, ಅಂಗವಿಕಲರಿಗೆ ವೀಲ್‌ಚೇರ್, ಪ್ರಕಟಣೆಗಳ ಮಾರಾಟ ಕೌಂಟರ್. ಗೈಡ್ ಸೌಕರ್ಯ, ನಿರ್ದೇಶನ ಮತ್ತು ಹೆಸರು ಫಲಕಗಳು ಸಾಂಸ್ಕೃತಿಕ ಸೋಟೀಸ್ ಫಲಕಗಳು, ಉತ್ತಮ ಮಟ್ಟದ ಆಕರ್ಷಣೀಯ ಹುಲ್ಲುಹಾಸು ಮುಂತಾದವುಗಳು.

5235(5801) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಸರ್ಕಾರ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ವಿಜಾಪುರ ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಹಣ ತುಂಬಾ ಕಡಿಮೆಯಾಗಿದ್ದು, ಈ ರೀತಿಯ ತಾರತಮ್ಯಕ್ಕೆ ಕಾರಣವೇನು;

ಇ) ವಿಜಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆಗಳು ಸರ್ಕಾರದ ಮುಂದಿವೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗುವುದು;

ಉ) ಎಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗುವುದು;

ಊ) ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಮುಜರಾಯಿ ಇಲಾಖಾವತಿಯಿಂದ ಯಾವ ಯಾವ ಯೋಜನೆಗಳಡಿ / ಕಾರ್ಯಕ್ರಮದಡಿಯಲ್ಲಿ ಹಣ ಬಿಡುಗಡೆ ಮಾಡಲಾಗುವುದು, ಆ ಯೋಜನೆಗಳು ಯಾವುವು?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಮಾರ್ಚ್ ರೂ. 2,45,30,000/–

ಏಪ್ರಿಲ್ –

2004–05ನೇ ಸಾಲಿನಲ್ಲಿ ಜಿಲ್ಲಾವಾರು ಅನುದಾನ ಬಿಡುಗಡೆ ಮಾಡಿದ ವಿವರ ಅನುಬಂಧದಲ್ಲಿ ಸಲ್ಲಿಸಿದೆ.